ಪ್ರಜಾವಾಣಿ

ಅಖಿಲ ಭಾರತ ಕ್ರೀಡಾ ಉತ್ಸವ

# ಜೈನ್ ವಿವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡದವರು ಇಲ್ಲಿ ಕೊನೆಗೊಂಡ 'ವಿಐಇ 2013' ಅಖಿಲ ಭಾರತ ಕ್ರೀಡಾ ಉತ್ಸವದ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಎಚ್‌ಎಎಲ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಜೈನ್ ವಿವಿ ತಂಡ ಎಂಟು ವಿಕೆಟ್‌ಗಳಿಂದ ಚೆನ್ನೈನ ಎ.ಎಂ. ಜೈನ್ ಕಾಲೇಜು ತಂಡವನ್ನು ಮಣಿಸಿತು. ಮೊದಲು ಬ್ಯಾಟ್ ಮಾಡಿದ ಚೆನ್ನೈನ ತಂಡ 37 ಓವರ್‌ಗಳಲ್ಲಿ 127 ರನ್ ಪೇರಿಸಿದರೆ, ಜೈನ್ ವಿವಿ ತಂಡ 23 ಓವರ್‌ಗಳಲ್ಲಿ 2 ವಿಕೆಟ್‌ಗೆ 130 ರನ್ ಗಳಿಸಿ ಜಯ ಸಾಧಿಸಿತು. ಆರ್. ಸಮರ್ಥ್ (44) ಮತ್ತು ಕೌನೈನ್ ಅಬ್ಬಾಸ್ (36) ಆತಿಥೇಯ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಹಾಕಿ: ಇದೇ ಕ್ರೀಡಾ ಉತ್ಸವದ ಹಾಕಿ ಟೂರ್ನಿಯಲ್ಲಿ ಸುರಾನಾ ಕಾಲೇಜು ಪ್ರಶಸ್ತಿ ಜಯಿಸಿತು. ಫೈನಲ್‌ನಲ್ಲಿ ಸುರಾನಾ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 6–5 ರಲ್ಲಿ ಜೈನ್ ವಿವಿ ತಂಡವನ್ನು ಮಣಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1 ಗೋಲಿನಿಂದ ಡ್ರಾ ಸಾಧಿಸಿದ್ದವು.

ಈಜು: ಚೆನ್ನೈನ ಹಿಂದೂಸ್ತಾನ್ ವಿಶ್ವವಿದ್ಯಾಲಯ ಮತ್ತು ಎಂಒಪಿ ವೈಷ್ಣವ್ ತಂಡಗಳು ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಜೈನ್ ವಿವಿ ತಂಡ ಎರಡೂ ವಿಭಾಗಗಳಲ್ಲಿ 'ರನ್ನರ್ ಅಪ್' ಸ್ಥಾನ ಪಡೆದುಕೊಂಡಿತು.

ಟೆನಿಸ್ ಮತ್ತು ಬ್ಯಾಡ್ಮಿಂಟನ್‌ನಲ್ಲಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಜೈನ್ ವಿವಿ ತಂಡಗಳು ಚಾಂಪಿಯನ್ ಆದವು.



ಜೈನ್ ವಿಶ್ವವಿದ್ಯಾಲಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ 'ವಿಐಇ 2013' ಕ್ರೀಡಾ ಉತ್ಸವದ ಕ್ರಿಕೆಟ್ ಟೂರ್ನಿಯನ್ನು ಗೆದ್ದುಕೊಂಡ ಆತಿಥೇಯ ಜೈನ್ ವಿವಿ ತಂಡ. ನಿಂತವರು (ಎಡದಿಂದ) ಮಹೇಶ್, ಶಲೇಂದ್ರ, ವಿನೀತ್, ಲಿಯಾನ್, ಸುಚಿತ್, ಕೌನೈನ್ ಅಬ್ಬಾಸ್, ಶ್ರೇಯಸ್ ಗೋಪಾಲ್, ಪ್ರಭಾಕರ್ (ಮಂಡಿಯೂರಿದವರು) ಅಭಿನವ್, ಅಕ್ಷಯ್, ನಿಹಾಲ್, ಸಮರ್ಥ್ ರವಿಕುಮಾರ್, ಮನೋಹರ್